**OS: 11/2022**
**P.W-1**

**ಹಿರಿಯ ಶ್ರೇಣಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ಕೂಡ್ಲಿಗಿ**

ದಿನಾಂಕಃ 29.11.2025 ರಂದು ಸಾಕ್ಷಿದಾರರಿಗೆ, ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಪಾಟೀ ಸವಾಲು ಪ್ರತಿವಾದಿ ಪರ ವಕೀಲರಿಂದ**

ನನ್ನ ಹೆಂಡತಿಯ ಹೆಸರಿನಲ್ಲಿ ಮುದ್ದಣ್ಣನ ಕುಟುಂಬದ ಭೀಮಣ್ಣ ತಂದೆ ಗುಂಡಪ್ಪರವರಿಂದ ಒಂದು ಜಮೀನನ್ನು ಖರೀದಿ ಮಾಡಿದ್ದೆ ಎಂದರೆ ಸರಿ. ಭೀಮಣ್ಣನ ಕುಟುಂಬದವರು ಕುಟುಂಬದ ಆಸ್ತಿಗಳಿಗೆ ಸಂಬಂಧಿಸಿದಂತೆ ಭಾಗಾಂಶಕ್ಕಾಗಿ ಓ.ಎಸ್ ನಂಃ 218/2020 ರಂತೆ ದಾವೆ ಸಲ್ಲಿಸಿದ್ದರು ಎಂದರೆ ಸರಿ. ಆ ದಾವೆಯಲ್ಲಿ ನನ್ನ ಹೆಂಡತಿ ಖರೀದಿಸಿದ ಆಸ್ತಿಯನ್ನು ಸಹ ಸೇರಿಸಿ ನನ್ನ ಹೆಂಡತಿಗೆ ಸಮನ್ಸ್ ಕಳುಹಿಸಿದ್ದರು ಎಂದರೆ ಸರಿ. ಹಾಗಾಗಿ ಸದರಿ ಪ್ರಕರಣದ ಬಗ್ಗೆ ನನಗೆ 2018 ರಲ್ಲಿ ಗೊತ್ತಿತ್ತು ಎಂದರೆ ಸರಿ. ಸದರಿ ಪ್ರಕರಣ ದಾಖಲಿಸಿದ ನಂತರ ಈ ಪ್ರಕರಣವನ್ನು ಸಲ್ಲಿಸಲಾಗಿದೆ ಎಂದರೆ ಸರಿ. ಆ ಪ್ರಕರಣದಲ್ಲಿ ನನ್ನ ಹೆಂಡತಿಯ ಪರವಾಗಿ ಯಾವುದೇ ತಕರಾರನು ಸಲ್ಲಿಸಿರುವುದಿಲ್ಲ. ನನ್ನ ಹೆಂಡತಿ ಈ ಕೇಸಿನ ವಾದಿ ಆ ಆಸ್ತಿಯನ್ನು ಖರೀದಿಸಿದ್ದರು ಸಹ ಯಾಕೆ ತಕರಾರು ಸಲ್ಲಿಸಿಲ್ಲ ಎಂದರೆ ನನ್ನ ಹೆಂಡತಿಯ ಹೆಸರಿನಲ್ಲಿ ದಾಖಲೆಗಳು ಇದ್ದುದ್ದರಿಂದ ತಕರಾರು ಸಲ್ಲಿಸಿರುವುದಿಲ್ಲ. ನನ್ನ ಹೆಂಡತಿಗೆ ಮಾರಾಟ ಮಾಡಿದ್ದವರು ಮತ್ತು ನನ್ನ ಹೆಂಡತಿ ಶಾಮೀಲಾಗಿ ದಾಖಲಾತಿಗಳನ್ನು ಸೃಷ್ಟಿಸಿಕೊಂಡು ಈ ದಾವೆಯ ಪ್ರತಿವಾದಿ ವಿರುದ್ಧ ಸುಳ್ಳು ದಾವೆ ಸಲ್ಲಿಸಲಾಗಿದೆ ಎಂದರೆ ಸರಿಯಲ್ಲ.

ನಮಗೆ ಬೇಕಾದ ಸಾಕ್ಷಿದಾರರ ಸಹಿಯನ್ನು ನಿ.ಪಿ 6 ರ ದಾಖಲೆಗೆ ಹಾಕಿಸಿಕೊಂಡು ಸುಳ್ಳು ದಾವೆ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ನಿ.ಪಿ 6 ನ್ನು ಇ-ಸ್ಟ್ಯಾಂಪ್ ಪೇಪರ್ ನಲ್ಲಿ ಬರೆಯದೆ ಮುದ್ರಿತ ಹಸಿರು ಹಾಳೆಯ ಮೇಲೆ ಬರೆದುಕೊಂಡು ಸೃಷ್ಠಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ನಿ.ಪಿ 6 ರಲ್ಲಿರುವ ಪ್ರತಿವಾದಿಯ ಸಹಿ ಮತ್ತು ಅವರ ವಕೀಲರಿಗೆ ನೀಡಲಾದ ವಕಾಲತ್ತಿನಲ್ಲಿರುವ ಸಹಿ ಬೇರೆ-ಬೇರೆಯಾಗಿರುತ್ತವೆ ಎಂದರೆ ಸರಿಯಲ್ಲ. ನಿ.ಪಿ 6 ನ್ನು ಗವಿಯಣ್ಣ ಬರೆದಿಲ್ಲ ಬೇರೆ ಯಾರೋ ಬರೆದಿರುವ ದಾಖಲೆಗೆ ಸಹಿ ಮಾಡಿಸಿದ್ದೇವೆ ಎಂದರೆ ಸರಿಯಲ್ಲ. ಸದರಿ ಓ.ಎಸ್ ನಂಃ 218/2020 ರಲ್ಲಿ ನಮಗೆ ಮಾರಾಟ ಮಾಡಿದ ವ್ಯಕ್ತಿಗಳಿಂದ ನಮಗೆ ಯಾವುದೇ ತೊಂದರೆ ಆಗಿರುವುದಿಲ್ಲ. ನಾವು ಮತ್ತು ಪ್ರತಿವಾದಿ ಮತ್ತು ಅವರ ಅಣ್ಣ ಚನ್ನಾಗಿ ಇದ್ದೇವೆ. ಹಾಗಾಗಿ ನಾವು ಈ ಪ್ರಕರಣ ವಾಪಾಸ್ ತೆಗೆದುಕೊಳ್ಳಲು ತೊಂದರೆ ಇಲ್ಲ ಎಂದರೆ ನನಗೆ ಹಣ ಕೊಟ್ಟರೆ ವಾಪಾಸ್ ತೆಗೆದುಕೊಳ್ಳುತ್ತೇವೆ. ಪ್ರತಿವಾದಿ ನಮ್ಮಿಂದ ಯಾವುದೇ ಹಣ ಪಡೆದಿಲ್ಲ ಅವರಿಗೆ ನನ್ನಿಂದ ರೂ. 7,50,000/- ಹಣ ಪಡೆಯು ಅವಶ್ಯಕತೆ ಇರಲಿಲ್ಲ ಎಂದರೆ ಸರಿಯಲ್ಲ.

ನನ್ನ ಹೆಂಡತಿ ಯಾವುದೇ ವ್ಯಾಪಾರ ಮಾಡುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ನನ್ನ ಹೆಂಡತಿಯ ಹೆಸರಿನಲ್ಲಿ 10 ಎಕರೆ ನೀರಾವರಿ ಜಮೀನು ಇದೆ ಹಾಗೂ ಅವರ ಹೆಸರಿನಲ್ಲಿ ಆದಾಯ ತೆರಿಗೆಯನ್ನು ಸಹ ಪಾವತಿಸುತ್ತಿದ್ದೇವೆ. 2016 ರಿಂದ ನನ್ನ ಹೆಂಡತಿ ಆದಾಯ ತೆರಿಗೆ ಪಾವತಿದಾರರು ಆಗಿರುತ್ತಾರೆ. ರೂ. 7,50,000/- ಗಳನ್ನು ಆದಾಯ ತೆರಿಗೆ ವರದಿಯಲ್ಲಿ ನಮೂದಿಸಿರುವುದಿಲ್ಲ. ಲಕ್ಷ ರೂಪಾಯಿಗಳಲ್ಲಿ ಯಾವುದೇ ವ್ಯವಹಾರ ಮಾಡಿದರು ಆನ್-ಲೈನ್ ಮೂಲಕ ಮಾಡುತ್ತೇವೆ ಎಂದರೆ ಸರಿ. ಕೆಲವು ವ್ಯವಹಾರಗಳನ್ನು ಚೆಕ್ ಮೂಲಕ ಸಹ ಮಾಡಿರುತ್ತೇವೆ.

ಪ್ರತಿವಾದಿಗೆ ನಾನು ಬ್ಯಾಂಕ್ ಮೂಲಕ ಅಥವಾ ಚೆಕ್ ಮೂಲಕ ಸದರಿ ವ್ಯವಹಾರ ಮಾಡಿರುವುದಿಲ್ಲ, ನಗದು ರೂಪದಲ್ಲಿ ಹಣ ನೀಡಿರುತ್ತೇನೆ. ನಾನು ಎಲ್ಲಾ ವ್ಯವಹಾರವನ್ನು ಬ್ಯಾಂಕ್ ಮೂಲಕವೇ ಮಾಡುತ್ತಿದ್ದರಿಂದ ನಗದು ರೂಪದಲ್ಲಿ ಪ್ರತಿವಾದಿಗೆ ಯಾವುದೇ ಹಣ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಹಣವನ್ನು ಬ್ಯಾಂಕ್ ನಿಂದ ನಗದೀಕರಿಸಿಕೊಂಡು ಪ್ರತಿವಾದಿಗೆ ಕೊಟ್ಟಿರುತ್ತೇನೆ. ಬ್ಯಾಂಕ್ ನಿಂದ ಹಣ ಪಡೆದು ಪ್ರತಿವಾದಿಗೆ ಕೊಟ್ಟಿರುತ್ತೇವೆಂದು ನನ್ನ ವಾದ ಪತ್ರದಲ್ಲಿ ಮತ್ತು ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆಸಿರುವುದಿಲ್ಲ. ರೂ. 7,50,000/- ಬರಬೇಕಾಗಿದೆ ಎಂದು ಆದಾಯ ತೆರಿಗೆ ವರದಿಯಲ್ಲಿ ನಮೂದಿಸಿರುವುದಿಲ್ಲ. ಕಾನೂನುಬದ್ಧವಾಗಿ ಪ್ರತಿವಾದಿಯ ಜೊತೆ ವ್ಯವಹಾರ ಮಾಡದೆ ಇರುವ ಕಾರಣ ಅವರಿಂದ ಯಾವುದೇ ಪರಿಹಾರ ಪಡೆಯಲು ವಾದಿ ಅರ್ಹರಲ್ಲ ಎಂದರೆ ಸರಿಯಲ್ಲ. ನನ್ನ ಹೆಂಡತಿ ನ್ಯಾಯಾಲಯಕ್ಕೆ ಬಂದರೆ ಸತ್ಯ ಗೊತ್ತಾಗುತ್ತದೆ ಎಂಬ ಕಾರಣಕ್ಕಾಗಿ ಅವರು ನ್ಯಾಯಾಲಯಕ್ಕೆ ಬಂದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ).

**ಓ,ಹೇ,ಕೇ,ಸರಿ ಇದೆ.**

**ಹಿ.ಸಿ.ಜೆ ಮತ್ತು ಜೆ.ಎಂ.ಎಫ್.ಸಿ**
**ಕೂಡ್ಲಿಗಿ.**